**ಪ್ರಮಾಣೀಕರಿಸಲಾದ ದಿನಾಂಕ : 16.08.2025.**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. K.N.G ವಕೀಲರಿಂದ</u> :-**

ನಾನು ಡಿಗ್ರಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಯರು ನನ್ನ ಭಾಮೈದರು. ರಾಮಣ್ಣ ಎನ್ನುವವರು ಪಾಲಾಕ್ಷ, ಚನ್ನೇಗೌಡ ಮತ್ತು ಇತರರ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ವಕೀಲರು ಮಾಹಿತಿ ಕೊಟ್ಟಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಯ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ಈ ದಾವೆಯನ್ನು ಸುಮಾರು 7-8 ಜಮೀನುಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರಬಹುದು. ಸದರಿ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ-1 ಪಾರೀಕತ್ತಿನಲ್ಲಿ ನಮೂದು ಮಾಡಿರುವಂತಹ ಆಸ್ತಿಗಳು ಕೆಂಪಯ್ಯರವರಿಗೆ ಸೇರಿದ್ದಾಗಿರುತ್ತದೆ. ಕೆಂಪಯ್ಯನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಕೆಂಪಯ್ಯರವರಿಗೆ ಸದರಿ ಆಸ್ತಿಗಳು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕೆಂಪಯ್ಯನವರಿಗೆ 3 ಗಂಡು ಮಕ್ಕಳು, ಎಷ್ಟು ಜನ ಹೆಣ್ಣು ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಿಪಿ-1 ಪಾರೀಕತ್ತನ್ನು ನೋಂದಣಿ ಮಾಡಿಸಿರುವುದಿಲ್ಲ. ನಿಪಿ-1 ಪಾರೀಕತ್ತು ಮಹಾಲಿಂಗಪ್ಪ,

ಮಹಾಲಕ್ಷ್ಮಮ್ಮ ಮತ್ತು ಪಾರ್ವತಮ್ಮನವರ ನಡುವೆ ಆಗಿರುತ್ತದೆ. ನಿಪಿ-1 ಪಾರೀಕತ್ತನ್ನು ಖಾಲಿ ಬಿಳಿ ಹಾಳೆಯಲ್ಲಿ ಬರೆಯಲಾಗಿರುತ್ತದೆ. ನಿಪಿ-1 ಪಾರೀಕತ್ತನ್ನು 2002 ರಲ್ಲಿ ಮಾಡಲಾಗಿರುತ್ತದೆ. ನಿರ್ದಿಷ್ಟ ದಿನಾಂಕ ಗೊತ್ತಿಲ್ಲ. ಸದರಿ ಪಾಲು ಪಾರೀಕತ್ತನು 3 ಪ್ರತಿಯಲ್ಲಿ ಬರೆಯಲಾಗಿರುತ್ತದೆ. 3 ಜನರ ಪ್ರತಿಯಲ್ಲಿ ಅವರವರಿಗೆ ಬಂದಂತಹ ಜಮೀನಿನ ಹಿಸ್ಸೆಗಳ ಬಗ್ಗೆ ನಮೂದಾಗಿರುತ್ತದೆ. ಪಾರ್ವತಮ್ಮನವರ ಗಂಡನ ಹೆಸರು ಚೆಲುವಪ್ಪ. ಪಾರ್ವತಮ್ಮನವರಿಗೆ 4 ಜನ ಮಕ್ಕಳು. ಅವರು ಚನ್ನೇಗೌಡ, ಪಾಲಾಕ್ಷ, ಇನ್ನುಳಿದ ಮಕ್ಕಳ ಹೆಸರು ನನಗೆ ನೆನಪಿಲ್ಲ. ನಿಪಿ-1 ಪಾಲು ಪಾರೀಕತ್ತನ್ನು ಮಾಡುವ ಕಾಲಕ್ಕೆ ಪಾರ್ವತಮ್ಮನವರ ಮಕ್ಕಳು ಪ್ರಾಪ್ತ ವಯಸ್ಸಿನಲ್ಲಿ ಇದ್ದರು. ನಿಪಿ-1 ಕ್ಕೆ ಪಾರ್ವತಮ್ಮ ಮಾತ್ರ ಹಾಕಿರುತ್ತಾರೆ, ಅವರ ಮಕ್ಕಳು ಹಾಕಿರುವುದಿಲ್ಲ.

ಲಕ್ಷ್ಮಮ್ಮನವರ ಗಂಡನ ಹೆಸರು ಚನ್ನೇಗೌಡ. ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಅವರು ರಮೇಶ, ಸುರೇಶ ಮತ್ತು ಗೌರಮ್ಮ ಆಗಿರುತ್ತಾರೆ. ಪಾಲುಪಾರೀಕತ್ ಆಗುವ ಕಾಲಕ್ಕೆ ಅವರು ಪ್ರಾಪ್ತ ವಯಸ್ಕರಾಗಿದ್ದರು. ಲಕ್ಷ್ಮಮ್ಮನವರ ಮಕ್ಕಳ ಸಹಿಗಳನ್ನು ಪಡೆದಿರುವುದಿಲ್ಲ.

ಮಹಾಲಿಂಗಪ್ಪನವರ ತಂದೆಯ ಹೆಸರು ಕೆಂಪಯ್ಯ. ಮಹಾಲಿಂಗಪ್ಪನವರಿಗೆ ಮಕ್ಕಳು ಇಲ್ಲ. ಆತನಿಗೆ ಒಂದು ಸಾಕು ಮಗಳು ಇದ್ದಾಳೆ.

ಪಾಲುಪಾರೀಕತ್ತಿನಲ್ಲಿ ಯಾರ ಯಾರ ಹೆಸರಿಗೆ ಯಾವ ಸರ್ವೆ ನಂಬರ್, ಅದರ ವಿಸ್ತೀರ್ಣ ಹಾಗೂ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಲಕ್ಷ್ಮಮ್ಮ ಮತ್ತು ಪಾರ್ವತಮ್ಮನವರಿಗೆ ಯಾವುದೇ ಪಾರೀಕತ್ತು ಆಗಿರುವುದಿಲ್ಲ, ಕೇವಲ ಮಹಾಲಿಂಗಪ್ಪನವರಿಗೆ ಮಾತ್ರ ಆಗಿರುತ್ತದೆ. ನನಗೆ ಈ ದಾವಾ ಆಸ್ತಿಗಳ ಬಗ್ಗೆ ಹಾಗೂ ನಿಪಿ-1 ಪಾರೀಕತ್ತಿನ ಬಗ್ಗೆ ಯಾವುದೇ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಭಾಮೈದನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಪಾರೀಕತ್ತನು ಸಂಜೆ 7-00 ಗಂಟೆಯಿಂದ ರಾತ್ರಿ 11-00 ಗಂಟೆಯವರೆಗೆ ಬರೆಯಲಾಗಿದೆ. ನಿಪಿ-1 ಪಾರೀಕತ್ತಿನಲ್ಲಿ ಯಾವುದೇ ತಿದ್ದುಪಡಿಯಾಗಿರುವುದಿಲ್ಲ. ನಿಪಿ-1 ಪಾರೀಕತ್ತನ್ನು ಎಂ.ಎಲ್.ಮಲ್ಲಪ್ಪ ಎಂಬುವವರು ಬರೆದಿರುತ್ತಾರೆ. ಅವರು ಲೈಸೆನ್ಸ್ ಹೋಲ್ಡರ್ ಇರುತ್ತಾರೆ. ಅವರು ಈಗ ಮರಣ ಹೊಂದಿರುತ್ತಾರೆ. ಪಾರೀಕತ್ ಮಾಡುವ ಕಾಲಕ್ಕೆ ನಾವು 4 ರಿಂದ 6 ಜನ ಇದ್ದೆವು. ಅವರುಗಳ ಹೆಸರು ದೊಡ್ಡೇಗೌಡ, ದೇವರಾಜು, ವೆಂಕಟಾಪುರದ ಹುಚ್ಚೇಗೌಡ, ನಾನು ಇದ್ದೆವು. ಅವರುಗಳ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ಪಾಲು ಪಾರೀಕತ್ ಮಾಡುವ ಕಾಲಕ್ಕೆ ಕೇವಲ ಗಂಡು ಮಕ್ಕಳನ್ನು ಸೇರಿಸಿ ಮಾಡಲಾಗಿರುತ್ತದೆ. ಹೆಣ್ಣು ಮಕ್ಕಳನ್ನು ಸೇರಿಸಿಕೊಂಡಿರುತ್ತದೆ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**OS. No.365/2019** **PW – 2**

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**